ಫಾರೆಸ್ಟ್ ಇಲಾಖೆ.

ಇಸ್ತಿಹಾರ್‌ನಾಮೆ.

ತಾರೀಖು 22ನೇ ಏಪ್ರೆಲ್ 1890ನೇ ಇಸವಿ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವದೇನಂದರೆ,— ಕಡೂರು ಡಿಸ್ಟ್ರಿಕ್ಟಿನಲ್ಲಿ ಉತ್ಪತ್ತಿ ಆದ ಇದರಡಿ ನಮೂದಿಸಿರುವ ಚೌಬೀನೆ ವಗೈರೆ ಸಾಮಾನು ಆಯಾ ಬಾಜುದಲ್ಲಿ ಕಂಡ ಸ್ಥಳ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾಡಲ್‌ಪಡುತ್ತ.

ಹರಾಜು ಮಾಡಲ್ಪಡುವ ಸ್ಥಳದ ಹೆಸರು.	ಹರಾಜು ತಾರೀಖು.	ತ್ಯಾಗದ ದೂಲಗಳು.	ಜಂಗಲಿ ದೂಲಗಳು.	ತ್ಯಾಗ ಮತ್ತು ಜಂಗಲಿ ಕಂಬುಗಳು.	ಬೊಂಬುಗಳು.	ತ್ಯಾಗದ ಕಾಪಿ ಟಿಂಗ್ಸ್ ವ ಕೊಂಬೆ ಮರಗಳು.	ಷರಾ.
ಹೊನ್ನೇಗುಡ್ಡ ..	1890ನೇ ಇಸವಿ ಮೇ 10	..	..	..	..	328	ಮೊಬಲಗು ಪೂರ್ವತಿಮಾಡಿದ ತಾರೀಖು ಲಾಗಾಯತು ಸಾಮಾನಿನ ಉಸ್ತುವಾರಿ ಬಂದೋಬಸ್ತು ಕಯಕ್ಕೆ ತೆಗದುಕೊಂಡವರಿಗೆ ಶೇರಿ ಯಿರುತ್ತ.
ಚಂಪದಹಳ್ಳ ..	ಡಿಟೋ 12	..	..	..	..	1185	
ಬೀಕನಹಳ್ಳ ..	ಡಿಟೋ 22	..	..	..	..	1698	
ತರೀಕೆರೆ ಡಿಪೋ ..	ಡಿಟೋಜರ್ಜ್ 5	..	70	250 ತ್ಯಾಗ	20,000	..	ಹೆಚ್ಚು ಕಡಮೆಯಾಗಿ
ಹೆಬ್ಬೇ ಡಿಪೋ ..	ಡಿಟೋ 10	150	100	..	..	..	
ಲಕ್ಕವಳ್ಳಿ ಡಿಪೋ ..	ಡಿಟೋ 16	600	200	150 ತ್ಯಾಗ 200 ಜಂಗಲಿ			

ಹರಾಜಿನ ಷರತ್ತುಗಳು—(1) ಡಿಪೋಗಳಲ್ಲಿ ಮಾರಲ್ಪಡುವ ಬೆಲಗು ಮತ್ತು ದೂಲಗಳ ವಿಷಯದಲ್ಲಿ 1887ನೇ ಇಸವಿ ಆಗಸ್ಟ್ 30ನೇ ತಾರೀಖಿನ 99ನೇ ನಂ. ನೋಟಿಫಿಕೇರ್ಷ ನೋಡತಕ್ಕದ್ದು.

(2) ಕಾಡಿನಲ್ಲಿ ಇರುವ ತ್ಯಾಗ ಕಾಪಿಸಿಂಗ್ಸ್‌ಯಾನೆ ಕೊಂಬೆ ಮರಗಳ ವಿಷಯದಲ್ಲಿ ಹರಾಜಿನ ಪೂರಾ ಮೊಬಲಗನ್ನು ಮೂರು ದಿವಸಗಳಲ್ಲಿಯೇ ಪೂರ್ತಿ ಮಾಡತಕ್ಕದ್ದು, ತಪ್ಪಿದಲ್ಲಿ ಸದರಿ ಸಾಮಾನನ್ನು ಪುನಹ ಹರಾಜು ಮಾಡಲ್ಪಡುತ್ತೆ. ಇದರಿಂದ ಸಂಭವಿಸುವ ನಷ್ಟಕ್ಕೆ ಮೊದಲ ಹರಾಜಿನಲ್ಲಿ ತೆಗದುಕೊಂಡವನು ಬದ್ಧನಾಗಿರುತ್ತಾನೆ. ಹರಾಜಿನಲ್ಲಿ ಪಡದ ಪೂರಾ ಸಾಮಾನುಗಳನ್ನು ಹರಾಜು ತಾರೀಖು ಲಾಗಾಯತು 10 ದಿವಸಗಳಲ್ಲಿ ಸಾಗಿಸಿಕೊಂಡು ಹೋಗತಕ್ಕದ್ದು.

ಎಲ್. ರಿಕ್ಕೆಟ್ಸ್,
ಫಾರೆಸ್ಟ್ ಇನ್‌ಸ್ಪೆಕ್ಟರ್ ಜನರಲ್.

ಮೈಸೂರು ಡಿಸ್ಟ್ರಿಕ್ಟು.

ತಾರೀಖು 22ನೇ ಏಪ್ರೆಲ್ 1890.

ಇದರಿಂದ ಪ್ರಕಟಪಡಿಸುವದೇನಂದರೆ, ಮೈಸೂರು ಡಿಸ್ಟ್ರಿಕ್ಟಿನಲ್ಲಿ ಇದರಡಿಕಂಡ ತಾಲ್ಲೂಕುಗಳಲ್ಲಿನ ಹಿಡುವಳಿಯಲ್ಲಿ ಯಿಲ್ಲದ ಕಂದಾಯ ಗೊತ್ತಿಲ್ಲದಂತಾ ಮತ್ತು ಗೊತ್ತು ಮಾಡಲ್ಪಟ್ಟ ಜಮೀನುಗಳು ಆಡಗಿ ಯಿರುವಂಥಾ ಮತ್ತು ಹಳೆ ಮತ್ತು ಹೊಸ ಲೈನುಗಳ ಮಧ್ಯೆ ಯಿರುವ ಡಿಸ್ಟ್ರಿಕ್ಟು ಫಾರೆಸ್ಟುಗಳ, ಗ್ರಾಮ ಬೇಲಿಗಳ, ಅಮೃತಮಹಲ್ ಕಾವಲ್‌ಗಳ, ಪ್ಲಾಂಟೇರ್ಷಗಳು, ಸಂದಲ್ ರಿಪ್ರೊಡಕ್ಷ್ಯ ಬ್ಲಾಕ್ ವಿನಹ ಅಮರಾಯಿ ಮತ್ತು ಅಮರಾಯಿ ಬೇಲಿಗಳ ಪಸಾರೆ ಹುಟ್ಟುವಳಿಗಳನ್ನ 1890ನೇ ಇಸವಿ ಮೇ ಮಾಹೆ ಗುರ್ರೇ ತಾರೀಖು ಲಾಗಾಯತು 1891ನೇ ಇಸವಿ ಏಪ್ರೆಲ್ 30ನೇ ತಾರೀಖು ವರಿಗೆ ಜವಾಬಿಸುವ ಹಕ್ಕುದಾರಿಯು ಯಾವ ರೀತಿ ಹರಾಜು ಮಾಡಿದಲ್ಲಿ ಸರ್ಕಾರಕ್ಕೆ ಬರಬಹುದೆಂದು ಅವರಿಗೆ ಸೂಕ್ತ ತೋರುತ್ತೋ ಆ ಮೇರೆ ಆಯಾಯ ತಾಲ್ಲೂಕು ಅಮಲ್‌ದಾರ್ರ ರೂಬರೂ ಹೋಬಳಿವಾರ್ ಅಥವಾ ಒಟ್ಟು ತಾಲ್ಲೂಕುವಾರ್ ಇದರಡಿಕಂಡ ತಾರೀಖುಗಳಲ್ಲಿ ಬಹಿರಂಗವಾದ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ